ಶ್ರೀ ಕೆ. ಹೆಚ್. ರಂಗನಾಥ್. (ಶಿಕ್ಷಣ ಸಚಿವರು).—

ಸಂಖ್ಯೆ	ಪುತ್ತೂರು	ಬಂಟ್ವಾಳ	ಬೆಳ್ತಂಗಡಿ	ಮಂಗಳೂರು	ಕಾರ್ಕಳ	ಉಡುಪಿ	ಕುಂದಾಪುರ	ಒಟ್ಟು
(ಅ)	೦೩	೦೩	೮೫	೦೨	೦೭	೦೫	೧೧	೦೯	೪೫
(ಆ)	೨೯	೨೭	೩೨	೧೩	೫೦	೩೨	೬೪	೬೧	೩೦೮
(ಇ)	೩೨	೩೧	೩೬	೧೫	೫೮	೩೫	೮೨	೭೮	೩೬೭

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೯ ಉಪನ್ಯಾಸಕರುಗಳ ಹುದ್ದೆಗಳು ಖಾಲಿ ಇವೆ

(ಉ) ಸಾಧ್ಯವಾದಷ್ಟು ಬೇಗ.

ರಾಜ್ಯದಲ್ಲಿ ಮಾನ್ಯತೆ ಪಡೆಯದ ಶಾಲೆಗಳು

೯೮೮. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆಯದ ಶಾಲೆಗಳಲ್ಲಿ ಈಗಲೂ ಕೂಡ ವಿದ್ಯಾರ್ಥಿಗಳ ಪ್ರವೇಶ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಈ ರೀತಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

(ಇ) ಸರ್ಕಾರವು ಮಾನ್ಯತೆ ನೀಡುವಾಗ ಅನುಸರಿಸುವ ಮಾನದಂಡಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಹೌದು.

(ಆ) ಸಾರ್ವಜನಿಕರಿಗೆ ವೃತ್ತ ಪತ್ರಿಕೆಗಳ ಮೂಲಕ ತಪ್ಪು ಮಾಹಿತಿಗಳನ್ನು ಇಂತಹ ಅನಧಿಕೃತ ಶಾಲೆಗಳಿಗೆ ಸೇರಿಸಬಾರದೆಂದು ಎಚ್ಚರಿಸಲಾಗುತ್ತಿದೆ. ಅನಧಿಕೃತ ಶಾಲೆಗಳಲ್ಲಿನ ವಿದ್ಯಾರ್ಥಿಗಳನ್ನು ಅವರ ವಯಸ್ಸನ್ನು ಪರಿಗಣಿಸಿ ಹಾಗೂ ಹಿಂದೆ ಓದುತ್ತಿದ್ದ ತರಗತಿಗಳ ಮಾರು ಪರೀಕ್ಷೆ ನಡೆಯಿಸಿ ಅಧಿಕೃತ ಶಾಲೆಗಳಿಗೆ ಸೇರಿಸಲು ಇಲಾಖೆಯು ಅನುಮತಿ ನೀಡುತ್ತಿದೆ.

(ಇ) ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯಲ್ಲಿ ಹೇಳಿರುವ ನಿಯಮಾವಳಿಗಳು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ

೯೯೬. ಶ್ರೀ ಮನೋಹರ ಐನಾಪುರ (ಬಳ್ಳಾಳ್ಳಿ) —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರವು ಅನುಮತಿ ನೀಡಿದೆಯೇ ;

(ಆ) ಹಾಗಿದ್ದಲ್ಲಿ, ಅನುಮತಿ ನೀಡಲಾದ ಶಾಲೆಗಳ ಸಂಖ್ಯೆ.

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.